ಸಿಗುತ್ತದೆ, ಅಲ್ಲಿ ನಿಂತರೆ ಮೂರು ನಾಲ್ಕು ಕಡೆಗಳಿಂದ ಬಂದವುಗಳಲ್ಲಿ ಯಾವುದಾದರೂ ಒಂದು ಆಟೊ ಹಿಡಿಯಬಹುದು ಎಂದು ಅವಳು ನಡೆಯತೊಡಗಿದಳು.

ಅವಳು ನಡೆಯುತ್ತಿದ್ದ ರಸ್ತೆಗೆ ಫುಟ್‌ಪಾತೇ ಇರಲಿಲ್ಲ. ಮೇಲಾಗಿ ಅಲ್ಲಿಯೇ ಎರಡು ಮೂರು ಕಟ್ಟಡಗಳನ್ನು ಕಟ್ಟುತ್ತಿದ್ದುದರಿಂದ ರಸ್ತೆ ತುಂಬ ಜಲ್ಲಿಪುಡಿ, ಕಬ್ಬಿಣ, ಒಡೆದ ಇಟ್ಟಿಗೆ ಎಲ್ಲ ಬಿದ್ದುಕೊಂಡಿದ್ದುವು. ಅದರಾಚೆ ಯಾರೋ ತಮ್ಮ ಕಾರನ್ನು ಪಾರ್ಕ್ ಮಾಡಿದ್ದುದರಿಂದ ಅದನ್ನು ದಾಟಲು ಆಕೆ ರಸ್ತೆಯ ತುಸು ಮಧ್ಯಕ್ಕೇ ಬರಬೇಕಾಯಿತು. ಹಿಂದಿನಿಂದ ಭರ್ರ್ ಎಂದು ಬರುತ್ತಿದ್ದ ಕಾರು ಬೈಕ್‌ಗಳು ತಮ್ಮ ವೇಗವನ್ನು ಒಂದಿಷ್ಟೂ ತಗ್ಗಿಸದೆ ಒಕ್ಕರಿಸಿ ಬರುತ್ತಿದ್ದುದರಿಂದ ಆಕೆ ಸಾವರಿಸಿಕೊಂಡು ನಡೆಯುವುದು ಅನಿವಾರ್ಯವಾಯಿತು.

ಅಷ್ಟರಲ್ಲಿ ಹಿಂದಿನಿಂದ ಅವಳ ದಿಕ್ಕಿನತ್ತಲೆ ಒಂದು ಆಟೊ ಬರುವುದು ಕಂಡು ಆಸೆಯಿಂದ ನಿಲ್ಲಿಸಲು ಕೈ ತೋರಿಸಿದಳು. ಆಟೊ ಭರ್ರೆಂದು ಬಂದು ಮುಂದೆ ಸಾಗಿತು. ಕತ್ತಲೆಯ ಮುಸುಕಿನಲ್ಲಿ ಅದರ ಒಳಗೆ ಯಾರೋ ಕೂತಿರುವುದು ಕಂಡಂತಾಗಿ ಅದಕ್ಕೇ ಅವನು ನಿಲ್ಲಿಸಲಿಲ್ಲ ಎಂದುಕೊಂಡಳು.

ಅವಳು ಮುಖ್ಯ ರಸ್ತೆಗೆ ಬರುವಷ್ಟರಲ್ಲಿ ತೀರ ಕತ್ತಲೆಯೇ ಆಗಿತ್ತು. ಎಲ್ಲ ವಾಹನಗಳೂ ಹೆಡ್ ಲೈಟನ್ನು ಹಾಕತೊಡಗಿದ್ದುವು. ಮಳೆಯೂ ತುಸು ಜೋರಾಗಿ ಬೀಳತೊಡಗಿತು.

ಮುಖ್ಯರಸ್ತೆಯ ಫುಟ್‌ಪಾತಿನಲ್ಲಿ ನಿಂತು ಆಕೆ ಹತ್ತಾರು ಆಟೊಗಳಿಗಾದರೂ ಕೈ ತೋರಿಸಿರಬೇಕು. ಒಬ್ಬರೂ ನಿಲ್ಲಿಸಲಿಲ್ಲ. ಕೆಲವು ಖಾಲಿ ಆಟೊಗಳು ಬಂದರೂ ಅವಳನ್ನು ಎಲ್ಲಿಗೆ ಹೋಗಬೇಕು ಎಂದು ಕೇಳುವ ಕನಿಷ್ಠ ಸೌಜನ್ಯವನ್ನೂ ತೋರಿಸಲಿಲ್ಲ. ಒಂದೆರಡು ಆಟೊಗಳು ಅವಳ ಹತ್ತಿರ ಬರುವಾಗ ವೇಗವನ್ನು ತಗ್ಗಿಸಿ ಎಲ್ಲಿಗೆ ಎನ್ನುವಂತೆ ಅವಳನ್ನು ಕೇಳಿ ಕೆಂಪೇಗೌಡ ನಗರ ಅನ್ನುವಷ್ಟರಲ್ಲಿ ದಿವ್ಯ ನಿರ್ಲಕ್ಷ್ಯದಿಂದ ವೇಗವನ್ನು ವೃದ್ಧಿಸಿದರು. ಬರಲ್ಲ ಅಂತ ಹೇಳುವ ಸೌಜನ್ಯವೂ ಅವರಲ್ಲಿ ಇರಲಿಲ್ಲ. ಇದರ ನಡುವೆ ಅವಳು ಸುಮಾರು ಇಪ್ಪತ್ತು ಇಪ್ಪತ್ತೈದು ಮಾರಾದರೂ ನಡೆದುಕೊಂಡು ಹೋಗಿರಬೇಕು.

ಫುಟ್‌ಪಾತ್ ಅಡ್ಡಾದಿಡ್ಡಿಯಾಗಿತ್ತು. ಹಲವು ಕಡೆ ಕೇಬಲ್ ವಯರುಗಳು ಬಿದ್ದಿದುರಿಂದ ಅವು ಕಾಲಿಗೆ ತೊಡರಿಕೊಳ್ಳುವುದನ್ನು ತಪ್ಪಿಸಲು ಆಕೆ ಎಚ್ಚರದಿಂದ ಕಾಲು ಹಾಕಿದಳು. ಆಗಲೇ ರಸ್ತೆ ಬದಿಯ ತಗ್ಗು ಸ್ಥಳದಲ್ಲಿ ಮಳೆಯ ನೀರು ಶೇಖರಗೊಂಡ ಕಾರಣ ಹಿಂದಿನಿಂದ ವೇಗವಾಗಿ ಬಂದ ವಾಹನವೊಂದರ ಚಕ್ರಕ್ಕೆ ಸಿಲುಕಿ ಅವಳ ಸೀರೆಯ ಮೇಲೆಲ್ಲ ರಪ್ಪನೆ ರಾಡಿ ಸಿಡಿಯಿತು. ಅಂದೇ ಬೆಳಗ್ಗೆ ಮಡಿ ಮಾಡಿದ ಸೀರೆಯುಟ್ಟು ಬಂದಿದ್ದ ಅವಳಿಗೆ ಇನ್ನೊಂದು ದಿನವಾದರೂ ಆ ಸೀರೆಯನ್ನು ಮರು ಉಡುವ ಹಾಗಿಲ್ಲ ಅನ್ನಿಸಿ ಅಳ್ಳಕವೆನಿಸಿತು. ಅದೇ ಧ್ಯಾನದಲ್ಲಿ ಆಕೆ ಮತ್ತಷ್ಟು ಮುಂದೆ ಸರಿದಳು.

ಮುಂದೆ ರಿಂಗ್ ರೋಡ್ ಅಡ್ಡವಾಗಿ ಓಡುತ್ತಿತ್ತು. ಅದನ್ನು ದಾಟಿದರೆ ಜಯನಗರ ಏಳನೆಯ ಬ್ಲಾಕಿನ ಸುಂದರ ಬಡಾವಣೆ. ಸೀದಾಸಾದಾ ಅಗಲವಾದ ಮುಖ್ಯ ರಸ್ತೆಗಳು. ಚಂದದ ಫುಟ್‌ಪಾತ್. ಅಲ್ಲಿ ಇನ್ನೂ ಹೆಚ್ಚಿನ ಆಟೊಗಳು ಓಡಾಡುತ್ತಿರುವುದರಿಂದ ಸಿಗುವ ಸಾಧ್ಯತೆ ಹೆಚ್ಚು. ಇಷ್ಟು ಮುಂದೆ ಬಂದ ಮೇಲೆ ಅಲ್ಲಿಯ ತನಕ ನಡೆಯುವುದೇ ಉತ್ತಮ ಎಂದು ಅವಳು ನಡೆಯುತ್ತಲೇ ಹೋದಳು.

ರಿಂಗ್ ರೋಡ್‌ನ ಹತ್ತಿರಕ್ಕೆ ಬಂದಂತೆ ಟ್ರಾಫಿಕ್ ಒಮ್ಮೆಲೇ ನಿಂತು ಹೋಗಿರುವುದು ಕಂಡಿತು. ಒಂದೇ ಒಂದು ವಾಹನವೂ ಮುಂದಕ್ಕೆ ಹೋಗದೆ ಸ್ಥಗಿತವಾಗಿತ್ತು. ಅನತಿ ದೂರದಲ್ಲಿ